ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

ಓ.ಎಸ್. **202/2022**

ಪಿ.ಡಬ್ಲೂ-**2**

ದಿಃ **01.08.2024** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಟಿ.ಎ ವಿಜಯಕುಮಾರ |
| ಗಂಡ/ತಂದೆಯ ಹೆಸರು | ಅಣ್ಣೇಗೌಡ |
| ವಯಸ್ಸು | ಸುಮಾರು 45 ವರ್ಷ |
| ಕೆಲಸ | ಮೊಜಣಿದಾರರು |
| ವಾಸಸ್ಥಳ | ಮೈಸೂರು |

ಮುಖ್ಯ ವಿಚಾರಣೆ ವಾದಿ ಪರ ಶ್ರೀ ಜೆ.ಎಂ.ಎಸ್. ವಕೀಲರಿಂದಃ

ಈಗ್ಗೆ ಒಂದೂವರೆ ವರ್ಷಗಳ ಹಿಂದೆ ಅರ್ಜಿದಾರರರಾದ ಬಿಲ್ಲನಾಯಕ ರವರು ಬೊಳನಹಳ್ಳಿ ಗ್ರಾಮದ ಸ.ನಂ.6/11 ನ್ನು ಹದ್ದುಬಸ್ತು ಮಾಡಿಕೊಡುವಂತೆ ನಾಡಕಚೇರಿ, ಬಿಳಿಕೆರೆ ಹೋಬಳಿಗೆ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯಂತೆ ಏಳು ದಿನಗಳ ಮುಂಚಿತವಾಗಿ ಸ.ನಂ.6/11 ರ ಆಜುಬಾಜು ದಾರರಿಗೆ ನೋಟಿಸ್ ನೀಡಿ, ದಿಃ 22.06.2022 ರಂದು ಸ್ಥಳಕ್ಕೆ ಭೇಟಿ ನೀಡಿರುತ್ತೇನೆ. ನಮ್ಮ ಕಚೇರಿಯಲ್ಲಿ ಲಭ್ಯ ಇದ್ದ ಮೂಲ ದಾಖಲಾತಿಗಳನ್ನು ಅನುಸರಿಸಿ, ಸ.ನಂ.6 ರ ಗಡಿ ಗುರುತುಗಳನ್ನು ಅನುಸರಿಸಿ, ಅಳತೆ ಮಾಡಿರುತ್ತೇನೆ. ಅಳತೆ ಮಾಡಿದಾಗ ಉತ್ತರ ದಿಕ್ಕಿನ ಸ.ನಂ.6/9 ರ ಹಿಡುವಳಿದಾರರು 0.1/2 ಗುಂಟೆ ಸ.ನಂ.6/11 ರಲ್ಲಿ ಒತ್ತುವರಿ ಮಾಡಿರುವುದು ಕಂಡು ಬಂದಿರುತ್ತದೆ. ಅದರ ಸಂಬಂಧ ನಕಾಶೆ ನೀಡಿರುತ್ತೇನೆ. ಸಾಕ್ಷಿಗೆ ನಿಪಿ-3 ನ್ನು ತೋರಿಸಿದ್ದು, ನಿಪಿ-3 ರಂತೆ ಸ್ಥಳದಲ್ಲಿ ನಕ್ಷೆಯನ್ನು ತಯಾರಿಸಿ, ಒತ್ತುವರಿಯಾದ ಜಾಗವನ್ನು ಗುರುತಿಸಿರುವುದಾಗಿ ಹೇಳಿರುತ್ತಾರೆ.

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಕೆ.ಆರ್. ವಕೀಲರಿಂದಃ

ಕೂಗಿಸಲಾಯಿತು ಯಾರು ಬರದೇ ಇದ್ದುದರಿಂದ, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.